**ಪಿಯಾಪಟ್ಟಣ ತಾಲ್ಲೂಕು ಹುಣಿಸೇತೊಪ್ಪಲು ಗ್ರಾಮದಲ್ಲಿ ರಾಷ್ಟೀಯ ಕುಡಿಯುವ ನೀರಿನ ಬ್ಯಾಂಕ್ ನಿರ್ಮಾಣ**

4050(4574) : ಶ್ರೀ ಬಸವರಾಜು ಹೆಚ್.ಸಿ. (ಪಿರಿಯಾಪಟ್ಟಣ) ಮಾನ್ಯ ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪಿರಿಯಾಪಟ್ಟಣ ತಾಲ್ಲೂಕು ಹುಣಸೇತೊಪ್ಪಲು ಗ್ರಾಮದ ರಾಷ್ಟೀಯ ಕುಡಿಯುವ ನೀರಿನ ಯೋಜನೆಯಡಿ ಟ್ಯಾಂಕ್ ಕಾಮಗಾರಿ ಮಂಜೂರಾತಿ ಆಗಿದ್ದು ಯಾವಾಗ;

ಆ) ಇದುವರೆವಿಗೂ ಕಾಮಗಾರಿ ಪ್ರಾರಂಭವಾಗದಿರಲು ಕಾರಣವೇನು;

ಇ) ಕಾಮಗಾರಿಯನ್ನು ಪ್ರಾರಂಭಿಸುವುದು ಯಾವಾಗ;

ಈ) ಪೂರ್ಣಗೊಳಿಸಲು ನಿಗದಿಪಡಿಸಿರುವ ಅವಧಿ ಎಷ್ಟು?

ಶ್ರೀ ಕೆ.ಬಿ. ಕೋಳಿವಾಡ್ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು)

ಅ) 99–2000 ನೇ ಸಾಲಿನಲ್ಲಿ ರೂ. 7.10 ಲಕ್ಷ ಅಂದಾಜಿನ ಹುಣಸೇತೊಪ್ಪಲು ಗ್ರಾಮದ ಕುಡಿಯುವ ನೀರಿನ ಯೋಜನೆ ಮಂಜೂರಾಗಿರುತ್ತದೆ.

ಆ) ಅಗತ್ಯ ಅನುದಾನ ಒದಗಿಸಿಕೊಂಡು 2002–03ರಲ್ಲಿ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲಾಗಿದೆ.

ಇ) ದಿನಾಂಕ :14.7.2003 ರಂದು ಕಾಮಗಾರಿ ಪ್ರಾರಂಭವಾಗಿರುತ್ತದೆ.

ಈ) 6 ತಿಂಗಳು.

**ಚಿಂತಾಮಣಿ ಕ್ಷೇತ್ರದಲ್ಲಿ ಕುಡಿಯುವ ನೀರಿನ ಸಮಸ್ಯೆ**

4065 (4538) : ಶ್ರೀ ಚೌಡಾರೆಡ್ಡಿ (ಚಿಂತಾಮಣಿ) ಮಾನ್ಯ ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಂತಾಮಣಿ ವಿಧಾನಸಭಾ ಕ್ಷೇತ್ತಕ್ಕೆ ಸೇರಿದ ಚೇಳೂರು ಹೋಬಳಿಯ ರಾಶ್ಟರುವು ಪಂಚಾಯಿತಿಯ ಗಡಂಪಲ್ಲಿ ಗ್ರಾಮದಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆ ಇರುವ ವಿಚಾರ ಸಕಾರದ ಗಮನಕ್ಕೆ ಬಂದಿದೆಯೇ;

ಆ) ಈಗಾಗಲೇ ಪಂಚಾಯತಿಯವರು ಒಂದು ಕೊಳವೆ ಬಾವಿ ಕೊರೆಸಿ ಪಂಪ್, ಮೋಟಾರ್, ಪೈಪು ಇತ್ಯಾದಿ ಹಾಕುವುದಕ್ಕೆ ಹಣ ಇಲ್ಲದೆ ನೀರು ಸರಬರಾಜು ಕಾರ್ಯ ಅಷ್ಟರಲ್ಲೇ ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈಗ ಇರತಕ್ಕಂತಹ ಕೊಳವೆ ಬಾವಿಗೆ ಪಂಪ್ ಮೋಟಾರ್, ಇತ್ಯಾದಿಯನ್ನು ಬಾಗೇಪಲ್ಲಿ ತಾಲ್ಲೂಕು ಸಮಿತಿಯಿಂದಾಗಲಿ ಅಥವಾ ಜಿಲ್ಲಾ ಪರಿಷತ್ತಿನಿಂದಾಗಲೀ ಯಾವುದಾದರೂ ಒಂದು ಯೋಜನೆಯಲ್ಲಿ ಸಾಮಗ್ರಿಗಳನ್ನು ಒದಗಿಸಿ ಆ ಗ್ರಾಮದ ಜನತೆಗೆ ನೀರು ಒದಗಿಸಲು ಸರ್ಕಾರ ಶೀಘ್ರವಾಗಿ ಕ್ರಮ ತೆಗೆದುಕೊಳ್ಳುತ್ತದೆಯೇ?

ಶ್ರೀ ಕೆ.ಬಿ. ಕೋಳಿವಾಡ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು)

ಅ) ಬಂದಿದೆ.

ಆ) ಮುಸಲಗಾನಿಪಲ್ಲಿ ಮತ್ತು ಗಡಂಪಲ್ಲಿ ಗ್ರಾಮಗಳಿಗೆ ಸಂಯುಕ್ತ ಕಿರು ನೀರು ಸರಬರಾಜು ಯೋಜನೆ ಇದ್ದು, ಕೊಳವೆ ಬಾವಿಯಲ್ಲಿ ಇಳುವರಿ ಕಡಿಮೆಯಾಗಿದ್ದರಿಂದ ಗಡಂಪಲ್ಲಿ ಗ್ರಾಮಕ್ಕೆ ಕುಡಿಯುವ ನೀರಿನ ಸಮಸ್ಯೆ ಉಂಟಾಗಿರುತ್ತದೆ. ಈ ಸಮಸ್ಯೆ ಪರಿಹರಿಸಲು ಗಡಂಪಲ್ಲಿ ಗ್ರಾಮಕ್ಕಗಿ ಪ್ರತ್ಯೇಕವಾಗಿ ಒಂದು ಕೊಳವೆ ಬಾವಿಯನ್ನು ಕೊರೆಯಲಾಗಿದೆ.

ಇ) ಮೇಲ್ಕಂಡ ಕೊಳವೆ ಬಾವಿಯಿಂದ ಗಡಂಪಲ್ಲಿ ಗ್ರಾಮಕ್ಕೆ ನೀರು ಸರಬರಾಜು ಮಾಡುವ ಕಾಮಗಾರಿಯನ್ನು 2003–04ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಳ್ಳಲಾಗಿದ್ದು, ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

**ರೋಣ ಪದವಿಪೂರ್ವ ಕಾಲೇಜಿನಲ್ಲಿ ಉಪನ್ಯಾಸಕರ ಯೋಜನೆ**

4077 (4565) : ಶ್ರೀ ಗುರುಪಾದಗೌಡ ಸಂಗನಗೌಡ ಪಾಟೀಲ್ (ರೋಣ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿವೆ;

ಆ) ರಾಜ್ಯದಲ್ಲಿ ಎಷ್ಟು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಉಪನ್ಯಾಸಕರ ಕೊರತೆ ಇದೆ;

ಇ) ಉಪನ್ಯಾಸಕರ ಕೊರತೆಗೆ ಕಾರಣವೇನು;

ಈ) ಗದಗ ಜಿಲ್ಲೆ ರೋಣ ಪದವಿಪೂರ್ವ ಕಾಲೇಜಿನಲ್ಲಿ ಉಪನ್ಯಾಸಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಉ) ಉಪನ್ಯಾಸಕರ ಕೊರತೆ ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)

ಅ) 684

ಆ) 495

ಇ) ಉಪನ್ಯಾಸಕರ ನಿವೃತ್ತಿ ಮತ್ತು ಬಡ್ತಿಗಳಿಂದ ಹೆಚ್ಚಿನ ಉಪನ್ಯಾಸಕರ ಹುದ್ದೆಗಳು ಖಾಲಿ ಆಗಿವೆ.

ಈ) ಹೌದು.

ಉ) ಕಾರ್ಯಭಾರ ಕಡಿಮೆ ಇರುವ ಹತ್ತಿರದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಂದ ಉಪನ್ಯಾಸಕರುಗಳನ್ನು ವಾರದಲ್ಲಿ 3 ದಿನ ನಿಯೋಜಿಸುವ ಮೂಲಕ ಕಾರ್ಯಭಾರವನ್ನು ನೀಗಿಸಲು ಜಿಲ್ಲಾ ಉಪನಿರ್ದೇಶಕರಿಗೆ ಪಹಿಸಲಾಗಿದೆ. ಬಡ್ತಿಗೆ ಮೀಸಲಾದ ಹುದ್ದೆಗಳನ್ನು ಅರ್ಹ ಪ್ರೌಢಶಾಲಾ ಸಹ ಶಿಕ್ಷಕರುಗಳಿಗೆ ಬಡ್ತಿ ನೀಡುವ ಮೂಲಕ ತುಂಬಲು ಕ್ರಮಕೈಗೊಳ್ಳಲಾಗುತ್ತಿದೆ. ಕರ್ನಾಟಕ ನಾಗರೀಕ ಸೇವೆಗಳು (ಅಂಶಕಾಲಿಕ ಉಪನ್ಯಾಸಕರಾಗಿ ಕೆಲಸ ನಿರ್ವಹಿಸುತ್ತಿರುವ ವ್ಯಕ್ತಿಗಳನ್ನು ಕರ್ನಾಟಕ ಸಾಮಾನ್ಯ ಸೇವೆಗಳು (ಪದವಿಪೂರ್ವ ಶಿಕ್ಷಣ ಇಲಾಖೆಯಲ್ಲಿ ವಿಲೀನಗೊಳಿಸುವಿಕೆ) (ವಿಶೇಷ) ನಿಯಮಾವಳಿಗಳು 1997, ದಿನಾಂಕ: 26.7.2003 ರಂದು ಜಾರಿಗೆ ಬಂದಿದ್ದು, ಆ ನಿಯಮಾವಳಿಗಳ ಪ್ರಕಾರ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಅರ್ಹ ಅಂಶಕಾಲಿಕ ಉಪನ್ಯಾಸಕರನ್ನು ಪದವಿಪೂರ್ವ ಶಿಕ್ಷಣ ಇಲಾಖೆಯಲ್ಲಿ ನೇಮಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.

**ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಆಯುರ್ವೇದ ಪದವಿಗೆ ಮಾನ್ಯತೆ ಇಲ್ಲದೇ ಇರುವುದು**

4091 (4717) : ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?